ಅಸಲು ದಾವಾ ಸಂ. 95 ಃ 2010

ಪಿ.ಡಬ್ಲ್ಯೂ. 1

ಪ್ರಃಮಾಃದಿಃ 01-09-2016.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿ ನಂ. 14 ಮತ್ತು 15 ರ ಪರವಾಗಿ ಎ ಜಿ ಪಿ ರವರಿಂದ ಃ

ನಾನು 8ನೇ ತರಗತಿವರೆಗೆ ಓದಿರುತ್ತೇನೆ. ಈ ದಾವೆಯು ಪ್ರತಿವಾದಿ 1 ರಿಂದ 13 ರವರ ವಿರುದ್ದ ಇರುವಂತಹ ವ್ಯಾಜ್ಯದ ಮೇಲೆ ದಾವೆ ಹಾಕಿರುವುದು ಎಂದರೆ ಸರಿ. ಪ್ರತಿವಾದಿ ನಂ.14 ಮತ್ತು 13 ರವರಿಗೆ ದಾವಾ ದಾಖಲಿಸುವ ಪೂರ್ವದಲ್ಲಿ ವಕೀಲರ ಮೂಲಕ ನೋಟೀಸು ಕೊಟ್ಟಿಲ್ಲ. ಏಕೆಂದರೆ ಅರ್ಜೆಂಟ್ ಇರುವ ಕಾರಣ ನೋಟೀಸು ಕೊಟ್ಟಿಲ್ಲ. ದಾವಾದ ಸಂಪೂರ್ಣ ಮಾಹಿತಿ ಇರುತ್ತದೆ. ಪ್ರತಿವಾದಿ ನಂ. 14 ಮತ್ತು 15 ರ ವಿರುದ್ದ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ಸದರಿಯವರನ್ನು ಅನಾವಶ್ಯಕವಾಗಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿಯವರ ವಿರುದ್ದ ಯಾವುದೇ ವ್ಯಾಜ್ಯ ಕಾರಣ ಇರದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಸ್ತಿ ರಕ್ಷಣೆ ಮಾಡುವ ಜವಾಬ್ದಾರಿ ಅವರದು ಎನ್ನುತ್ತಾರೆ. ಪ್ರತಿವಾದಿ ನಂ. 14 ಮತ್ತು 15 ರ ವಿರುದ್ದ ಯಾವುದೇ ಪರಿಹಾರ ಕೋರದೇ ಇರುವ ಕಾರಣ ಅವರ ವಿರುದ್ದ ದಾವೆ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ನಂ. 1 ರಿಂದ 4 ಮತ್ತು ಪ್ರತಿವಾದಿ 8 ರಿಂದ 12 ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಿದೆ

ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾಳಿ